## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 364 |
| ಸದಸ್ಯರ ಹೆಸರು : | ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ: | 18.07.2019 |
| ಉತ್ತರಿಸುವ ಸಚಿವರು : | ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು |

| ಕ್ರ.ಸಂ. | ಪ್ರಶ್ನೆಗಳು | ಉತ್ತರ |
|---|---|---|
| ಅ. | ಕೊಡಗು ಜಿಲ್ಲೆಯಲ್ಲಿ ನದಿಯ ಮರಳನ್ನು ಸಾರ್ವಜನಿಕರಿಗೆ ನೀಡಲು ಮರಳು ಯಾರ್ಡ್‌ಗಳನ್ನು ಮಾಡಿ ಟೆಂಡರ್ ನೀಡಲಾಗಿದೆಯೇ; ಇದ್ದಲ್ಲಿ ಅವುಗಳ ಹೆಸರಿನೊಂದಿಗೆ ವಿವರ ನೀಡುವುದು; | ಕೊಡಗು ಜಿಲ್ಲಾ ವ್ಯಾಪ್ತಿಯ ಲಕ್ಷಣ–ತೀರ್ಥ, ಕಾವೇರಿ ಮತ್ತು ಹೇಮಾವತಿ ನದಿ ಪಾತ್ರಗಳ ವ್ಯಾಪ್ತಿಯಲ್ಲಿ 17 ಮರಳು ಬ್ಲಾಕ್‌ಗಳಿಗೆ ಮರಳು ಗಣಿ ಗುತ್ತಿಗೆಗಳನ್ನು ಮಂಜೂರು ಮಾಡಲಾಗಿರುತ್ತದೆ. ಸದರಿ ಮರಳು ಗುತ್ತಿಗೆದಾರರುಗಳು ಕರ್ನಾಟಕ ಉಪ ಖನಿಜ ರಿಯಾಯಿತಿ ನಿಯಮಗಳು, 1994ರ ನಿಯಮ 31–Yರಂತೆ ಸ್ಟಾಕ್ ಯಾರ್ಡ್‌ಗಳನ್ನು ಸ್ಥಾಪಿಸಿ, ಸದರಿ ಸ್ಟಾಕ್‌ಯಾರ್ಡ್‌ಗಳಿಂದ ಮರಳನ್ನು ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಬೇಕಾಗುತ್ತದೆ. ಸದರಿ ಸ್ಟಾಕ್‌ಯಾರ್ಡ್‌ಗಳ ವಿವರಗಳು ಈ ಕೆಳಕಂಡಂತಿರುತ್ತದೆ. |

**ಜಿಲ್ಲೆಯಲ್ಲಿ ಗುತ್ತಿಗೆ ಮಂಜೂರಾತಿ ನೀಡಿರುವ ಮರಳು ಬ್ಲಾಕ್‌ಗಳ ವಿವರ**

| ಕ್ರ ಸಂ | ತಾಲ್ಲೂಕು | ಸ್ಟಾಕ್‌ಯಾರ್ಡ್ ನಿರ್ಮಿಸಿರುವ ಸ್ಥಳ ಮತ್ತು ಮರಳು ಬ್ಲಾಕ್‌ನ ಹೆಸರು | ಟೆಂಡರ್‌ದಾರರ ಹೆಸರು ಶ್ರೀಯುತರು | ವಿಸ್ತೀರ್ಣ |
|---|---|---|---|---|
| 1 | ಮಡಿಕೇರಿ | ಕಟ್ಟೆಮಾಡು ಬ್ಲಾಕ್–I | ಜಿ.ಕೆ.ತೋಟಪ್ಪನಾಯಕ | 5.00 |
| 2 | ಸೋಮವಾರಪೇಟೆ | ಕೆಲಕೊಡ್ಲಿ ಬ್ಲಾಕ್– I | ಪಿ.ಟಿ.ರಮೇಶ್ | 5.00 |
| 3 | ಮಡಿಕೇರಿ | ಕಡಿಯತ್ತೂರು | ಎಚ್.ಎ.ಮಹಮ್ಮದ್ ರಫೀಕ್ | 5.20 |
| 4 | ಮಡಿಕೇರಿ | ನಾಪೋಕ್ಲು ಬೇತು | ಡೆರಿಕ್ ಜೋಸೆಫ್ | 5.10 |
| 5 | ಮಡಿಕೇರಿ | ಬಿ–ಬಾಡಗ | ಜಾಕೀರ್ ಹುಸೇನ್ | 5.00 |
| 6 | ಸೋಮವಾರಪೇಟೆ | ಕಟ್ಟೆಪುರ ಬ್ಲಾಕ್–I | ಸಿ.ಆರ್.ಗಣೇಶ್ | 9.00 |
| 7 | ಸೋಮವಾರಪೇಟೆ | ಹಂಪಾಪುರ ಬ್ಲಾಕ್–II | ಅಬ್ದುಲ್ ಲತೀಫ್ | 12.00 |
| 8 | ಸೋಮವಾರಪೇಟೆ | ಮಲಗನಹಳ್ಳಿ ಬ್ಲಾಕ್–I | ಬಿ.ವಿ.ಮಂಜುನಾಥ ಮೆ॥ ಎಸ್.ವಿ & ಸನ್ಸ್ | 12.00 |
| 9 | ಮಡಿಕೇರಿ | ಬಲ್ಲಮಾವಟಿ | ಎಂ.ನಾಗರಾಜು ಮೆ॥ ಎಂ.ಕೆ.ಎಂಟರ್ ಪ್ರೈಸಸ್ | 6.00 |
| 10 | ಮಡಿಕೇರಿ | ಎಮ್ಮೆಮಾಡು ಬ್ಲಾಕ್–I | ರಾಮಪ್ಪ ನಾಗರಾಜಪ್ಪ ಪ್ರೊ. ಸುಮುಖ ಎಂಟರ್ ಪ್ರೈಸಸ್ | 5.00 |
| 11 | ಸೋಮವಾರಪೇಟೆ | ನೆಲ್ಲಿಹುದಿಕೇರಿ ಬ್ಲಾಕ್–II | ಸತೀಶ್ ಹೆಚ್.ಎನ್ | 10.00 |
| 12 | ವಿರಾಜಪೇಟೆ | ಗುಯ್ಯಾ–I | ಸತೀಶ್ ಹೆಚ್.ಎನ್ | 9.75 |
| 13 | ಸೋಮವಾರಪೇಟೆ | ಕೆಲಕೊಡ್ಲಿ ಬ್ಲಾಕ್– II | ಮಂಜಪ್ಪ ಹುಲುಗಾಬೋವಿ | 5.00 |
| 14 | ಸೋಮವಾರಪೇಟೆ | ಶಾಂತಪುರ | ಝಾಕೀರ್ ಹುಸೇನ್ | 12.00 |
| 15 | ಸೋಮವಾರಪೇಟೆ | ಹಂಪಾಪುರ ಬ್ಲಾಕ್– I | ವಿನೋದ್ ಬಿಎಸ್ ಮೆ॥ ಸಿಂಚನಾ ಅಸೋಸಿಯೇಟ್ಸ್ | 10.00 |
| 16 | ಮಡಿಕೇರಿ | ಎಮ್ಮೆಮಾಡು ಬ್ಲಾಕ್–II | ಪರ್ವತಯ್ಯ | 5.00 |
| 17 | ಮಡಿಕೇರಿ | ಕಟ್ಟೆಮಾಡು ಬ್ಲಾಕ್–IA | ಪಿ.ಟಿ.ರಮೇಶ | 5.00 |

- ವಿರಾಜಪೇಟೆ ತಾಲ್ಲೂಕು, ಗುಯ್ಯಾ–1 ರ ಗುತ್ತಿಗೆದಾರರು ಮರಳು ಗಣಿಗಾರಿಕೆ ಪ್ರಾರಂಭಿಸಿರುವುದಿಲ್ಲ ಹಾಗೂ ಸ್ಟಾಕ್‌ಯಾರ್ಡ್‌ನ್ನು ಸ್ಥಾಪಿಸಿರುವುದಿಲ್ಲ.

| | | |
|---|---|---|
| ಆ. | ಜಿಲ್ಲೆಯಲ್ಲಿನ ಸಾರ್ವಜನಿಕ ಮತ್ತು ಸರ್ಕಾರಿ ಕಾಮಗಾರಿಗಳನ್ನು ನಡೆಸಲು ಮರಳನ್ನು ಎಲ್ಲಿಂದ ಮತ್ತು ಯಾವ ರೀತಿಯಲ್ಲಿ ಒದಗಿಸಲಾಗುತ್ತಿದೆ; | ಜಿಲ್ಲೆಯಲ್ಲಿನ ಮರಳು ಗುತ್ತಿಗೆ ಪ್ರದೇಶಗಳಿಂದ ಮರಳನ್ನು ಸ್ಟಾಕ್‌ಯಾರ್ಡ್‌ಗಳಲ್ಲಿ ಸಂಗ್ರಹಿಸಿ ಸದರಿ ಸ್ಟಾಕ್‌ಯಾರ್ಡ್‌ಗಳಿಂದ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳನ್ನು ಪೂರೈಸಲಾಗುತ್ತಿದೆ. 2018–19ನೇ ಸಾಲಿನಲ್ಲಿ 20,750 ಮೆಟ್ರಿಕ್ ಟನ್ ಮರಳನ್ನು ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಪೂರೈಸಲಾಗುತ್ತದೆ.<br><br>ಅಲ್ಲದೆ, ಮಡಿಕೇರಿ ಜಿಲ್ಲಾ ವ್ಯಾಪ್ತಿಯ 1 ಎಂ–ಸ್ಯಾಂಡ್ ಘಟಕದಿಂದ ಹಾಗೂ ಪಕ್ಕದ ಹಾಸನ ಮತ್ತು ಮೈಸೂರು ಜಿಲ್ಲೆಗಳ ಎಂ–ಸ್ಯಾಂಡ್ ಘಟಕಗಳಿಂದ ಜಿಲ್ಲೆಯ ಸಾರ್ವಜನಿಕ ಹಾಗೂ ಸರ್ಕಾರಿ ಕಾಮಗಾರಿಗಳಿಗೆ ಮರಳು ಪೂರೈಕೆಯಾಗುತ್ತಿರುತ್ತದೆ. |
| ಇ. | ಈ ಮರಳು ಗಣಿಗಾರಿಕೆ ಮಾಡಲು ಇರುವ ಷರತ್ತು/ನಿಬಂಧನೆಗಳೇನು? (ವಿವರ ನೀಡುವುದು) | ನದಿ ಪಾತ್ರದಲ್ಲಿ ಮರಳು ಗಣಿಗಾರಿಕೆ ಸಂಬಂಧಿಸಿದ ಸೂಕ್ತ ಷರತ್ತು / ನಿಬಂಧನೆಗಳನ್ನು ಕರ್ನಾಟಕ ಉಪಖನಿಜ ರಿಯಾಯಿತಿ ನಿಯಮ–1994ರ ನಿಯಮ 31-Rರಲ್ಲಿ ರೂಪಿಸಲಾಗಿರುತ್ತದೆ. ಸದರಿ ನಿಯಮಗಳಲ್ಲಿನ ಪ್ರಮುಖ ಅಂಶಗಳು ಈ ಕೆಳಕಂಡಂತಿರುತ್ತವೆ.<br>• ಮರಳು ಗಣಿಗುತ್ತಿಗೆ ಪ್ರದೇಶಗಳ ಗುತ್ತಿಗೆ ಸರಹದ್ದುಗಳನ್ನು ಕಾಯ್ದುಕೊಂಡು ಗುತ್ತಿಗೆ ಪ್ರದೇಶಗಳ ಒಳಗಡೆ ಗಣಿಗಾರಿಕೆ ನಡೆಸಬೇಕು.<br>• ಪರಿಸರ ಅನುಮತಿ ಪತ್ರದಲ್ಲಿನ ಪ್ರಮಾಣಕ್ಕನುಗುಣವಾಗಿ ಮರಳು ಗಣಿಗಾರಿಕೆಯನ್ನು ನಡೆಸತಕ್ಕದ್ದು.<br>• ಮರಳು ಗಣಿಗಾರಿಕೆಯನ್ನು ಬೆಳಿಗ್ಗೆ 6 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಮಾತ್ರ ನಡೆಸಬೇಕು.<br>• ಕ್ವಾರಿ ಯೋಜನೆಯಲ್ಲಿ ನಿಗಧಿಪಡಿಸಿರುವ ಆಳಕ್ಕನುಸಾರವಾಗಿ ಮರಳು ಗಣಿಗಾರಿಕೆ ನಡೆಸಬೇಕು.<br>• ನದಿ ದಂಡೆಗೆ ಧಕ್ಕೆಯಾಗದಂತೆ ಸುರಕ್ಷಿತ ಅಂತರವನ್ನು ಕಾಯ್ದುಕೊಂಡು ಮರಳು ಗಣಿಗಾರಿಕೆಯನ್ನು ನಡೆಸಬೇಕು.<br>• ನದಿಗೆ ಅಡ್ಡಲಾಗಿ ರಸ್ತೆಗಳನ್ನು / ಸೇತುವೆಗಳನ್ನು / ಗುಂಡಿಗಳನ್ನು ನಿರ್ಮಿಸದೆ ಮರಳು ಗಣಿಗಾರಿಕೆ ನಡೆಸಬೇಕು.<br>• ಮರಳು ಗಣಿಗಾರಿಕೆಯಲ್ಲಿ Mechanized Boats ಮತ್ತು Dredgers ಬಳಸುವುದನ್ನು ನಿಷೇಧಿಸಿದೆ.<br>• ರಾಜ್ಯ / ಜಿಲ್ಲಾ ಪರಿಸರ ಅಂದಾಜೀಕರಣ ಪ್ರಾಧಿಕಾರ (SEIAA / DEIAA) ದ ಪರಿಸರ ಅನುಮತಿ ಪತ್ರದಲ್ಲಿ ವಿಧಿಸುವ ಷರತ್ತುಗಳಿಗೆ ಅನುಸಾರವಾಗಿ ಮರಳು ಗಣಿಗಾರಿಕೆಯನ್ನು ನಿರ್ವಹಿಸಬೇಕಾಗಿರುತ್ತದೆ. |

ಸಂಖ್ಯೆ: ಸಿಐ 156 ಎಂಎಂಎನ್ 2019

**(ರಾಜಶೇಖರ ಬಿ. ಪಾಟೀಲ)**
ಗಣಿ ಮತ್ತು ಭೂವಿಜ್ಞಾನ ಸಚಿವರು.